ಜಿ.ವಿ. ಗಣೇಶಯ್ಯ

ರಸ್ತೆಗಳ ಮೇಲೆ ರೂಪು ತಳೆದಿರುವ ವಿವಿಧ ಆಳ ಉದ್ದಗಲಗಳ ಹೊಂಡಗಳನ್ನು ನೋಡುತ್ತಿದ್ದಂತೆ ತಿಪ್ಪೇಶಿಯ ಪಿತ್ಥ ನೆತ್ತಿಗೇರಿತು. ತಿಪ್ಪೇಶಿ ನನ್ನನ್ನು ತನ್ನ ಸ್ಕೂಟರಿನ ಹಿಂದೆ ಕೂರಿಸಿಕೊಂಡು ನಮ್ಮ ನಗರದ ರಸ್ತೆಯ ಮೇಲೆ ಹೋಗುತ್ತಿದ್ದ.

ನೇರವಾಗಿ ಸ್ಕೂಟರು ನಡೆಸಿದರೆ ಹೊಂಡಗಳನ್ನು ಹಾರಿಸಬೇಕಾಗುತ್ತದೆ. ಆಗ ನಮ್ಮ ಶರೀರದೊಳಗಿನ ಐಟಮ್ಮುಗಳೆಲ್ಲ ಸ್ಥಾನಪಲ್ಲಟಗೊಳ್ಳುವ ಅಪಾಯವಿದೆ. ಈ ದರಿದ್ರ ರಸ್ತೆ ಹೊಂಡಗಳನ್ನು ತಪ್ಪಿಸಿಕೊಂಡು ಚಲಿಸಬೇಕೆಂದರೆ ಸ್ಕೂಟರನ್ನು ಸೊಟ್ಟಪಟ್ಟವಾಗಿ ಹಾವು ಹರಿದ ಹಾಗೆ ನಡೆಸಬೇಕಾಗುತ್ತದೆ! ಈ ಹೊಂಡಗಳು ಸಾಲದು ಅಂತ ರಸ್ತೆಯ ಅಲ್ಲಲ್ಲೇ ಹಂಪುಗಳು ಬೇರೆ. ಈ ಹಂಪುಗಳನ್ನು ಜಂಪ್ ಮಾಡಿ ಸ್ಕೂಟರಿನಲ್ಲಿ ಸಾಗುವುದು ಹುಡುಗಾಟದ ಮಾತಲ್ಲ. ಇವುಗಳ ಜೊತೆಗೆ ಜಲಮಂಡಳಿಯವರು, ಕೇಬಲ್‌ನವರು ರಸ್ತೆಗಳನ್ನು ಅಡ್ಡಡ್ಡಲಾಗಿ ಅಗೆದು, ಸರಿಯಾಗಿ ಹೇಳಬೇಕೆಂದರೆ ಸಿಗಿದು ಮಾಡಿರುವ ಕಿರು ನಾಲೆಗಳು ಬೇರೆ! ಒಟ್ಟಿನಲ್ಲಿ ಸರಾಗವಾಗಿ ಚಲಿಸಲು ಯೋಗ್ಯವಲ್ಲದ ರಸ್ತೆಗಳು, ನಮ್ಮ ನಗರದವು. ಧಡಧಡ ಧಡನೆ ಸದ್ದು ಮಾಡುತ್ತಾ, ತನ್ನ ಮೇಲೆ ಕುಳಿತಿರುವ ವ್ಯಕ್ತಿಗಳನ್ನು ಎತ್ತಿ ಎತ್ತಿ ಕುಕ್ಕುತ್ತಾ ಸಾಗುವ ಈ ಸ್ಕೂಟರುಗಳ ಚಲನ ವೈಖರಿಯನ್ನು ನಿಂತು ನೋಡುವುದೇ ಒಂದು ಮಜ!

'ಥೂ ಇವರ... ' ಅಂತ ತಿಪ್ಪೇಶಿ ಕ್ಯಾಕರಿಸಿ ಉಗಿಯಲು ತಯಾರಾದ.

'ಉಗೀ ಬಾಡಲೇ ತಿಪ್ಪೇಸಿ' ಅಂತ ತಡೆದೆ ನಾನು.

'ಯಾಕ್ಲಾ ಉಗೀ ಬ್ಯಾಡ್ದು? ಯಲಕ್ಸನ್ ಟೇಮ್‌ನಾಗೆ ಮನೆ ಮನೆಗೆ ಬಂದು ನಾವು

